ಮಾಡಿದ್ದಾರೆ ಎಂದು ಹೇಳಿದ್ದಾರೆ. ನಮಗೆ ಈಗಿರತಕ್ಕಂಥ ಪವರ್‌ಗೆ ಕಡಿಮೆ ರೇಟ್‌ನಲ್ಲಿ ಕೊಡುವುದಾದರೆ ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದ್ದಾರೆ. ಈ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈಗಾಗಲೇ ನಾವು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ We have already constituted a cabinet sub committee to look into these matters; to re-examine the whole thing.

ಆ ರೀತಿ Power Purchase Agreement ಮಾಡಿಕೊಂಡು ಕ್ಯಾನ್ಸಲ್ ಆಗಿದ್ದರೆ, we will re-consider it. ಇದು ಮೊದಲನೆಯದು. ನಂತರ ಇಥೆನಾಲ್ ಬ್ಲೆಂಡಿಂಗ್ ಬಗ್ಗೆ ಪೆಟ್ರೋಲ್ ಇದರಲ್ಲಿ Government of India statutory permission ಈಗಾಗಲೇ ಸಿಕ್ಕಿದೆ, ಆದುದರಿಂದ, ನಾನು ಖಂಡಿತವಾಗಿ ಈ ಒಂದು ಇಥೆನಾಲ್ ಪ್ರೊಡೆಕ್ಷನ್ ಬಗ್ಗೆ ಎನ್‌ಕರೇಜ್ ಮಾಡಬೇಕೆಂದು ಹೇಳಿದ್ದೀರಿ, we will definitely do that. ಆಮೇಲೆ ಮಾನ್ಯ ಶರದ್ ಪವಾರ್ ಅವರು ಸಕ್ಕರೆಗೆ ಸಂಬಂಧಪಟ್ಟಂಥ ಮಂತ್ರಿಗಳಾಗಿದ್ದಾರೆ. ಷುಗರ್ ಕೇನ್‌ಗೆ ಸಂಬಂಧಪಟ್ಟಂಥ ಮಂತ್ರಿಗಳಾಗಿದ್ದಾರೆ. ಅವರು ಈಗಾಗಲೇ ಮಹಾರಾಷ್ಟ್ರಕ್ಕೆ ಅಲ್ಲಿರತಕ್ಕಂಥ ಷುಗರ್ ಕೇನ್ ಡ್ಯೂಸ್ ನ್ನು ಕ್ಲಿಯರ್ ಮಾಡಲಿಕ್ಕೆ ಎಂದು 500 ಕೋಟಿ ರೂಪಾಯಿ ಸ್ಪೆಷಲ್ ಪ್ಯಾಕೇಜ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ತಮಿಳುನಾಡು ಸರ್ಕಾರದವರು ಸಹ ತೆಗೆದುಕೊಂಡು ಹೋಗಿದ್ದಾರೆ, ನಾನು ಕೇಂದ್ರ ಸರ್ಕಾರಕ್ಕೆ ಹೇಳಿದೆ. ಈ ಲಾಂಗ್ ಟರ್ಮ್ ಲೋನ್ಸ್ ಮತ್ತು ಮೀಡಿಯಮ್ ಟರ್ಮ್ಸ್ ಲೋನ್ ರೀಫೇಸ್ ಮಾಡಲಿಕ್ಕೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದೇವೆ, ಏಕೆ ಒಂದು ಪ್ಯಾಕೇಜನ್ನು ಕೇಳಬಾರದು ಎಂದು ಹೇಳಿದ್ದೀರಿ, ಅದನ್ನೂ ನಾವು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಪ್ರತಿ ಪ್ರಶ್ನೆಗೆ ಈ ರೀತಿ ಆದರೆ ನಾನು ಅನೇಕ ಪ್ರಶ್ನೆಗಳನ್ನು ಕೈ ಬಿಡಬೇಕಾಗುತ್ತದೆ. ಅದು ಸಾಧ್ಯವಾಗುವುದಿಲ್ಲ. ದಯಮಾಡಿ ಸಹಕರಿಸಬೇಕು. ಶ್ರೀಮತಿ ಶಂಕುತಲಾ ಶೆಟ್ಟಿಯವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ರೋಗಗ್ರಸ್ತ ಕೈಗಾರಿಕೆಗಳಿಗೆ ಬಾಕಿ ಇರತಕ್ಕ ಸಹಾಯಧನ

50(182) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) : ಮಾನ್ಯ ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) :

ಆ) ಇವುಗಳಿಗೆ ಸರ್ಕಾರದ ಸಹಾಯಧನವನ್ನು ಮಂಜೂರು ಮಾಡಲಾಗಿದೆಯೇ :

ಇ) ಹಾಗಿದ್ದಲ್ಲಿ, ಎಷ್ಟು ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ :

ಈ) ರೋಗಗ್ರಸ್ತ ಕೈಗಾರಿಕೆಗಳಿಗೆ ಸರ್ಕಾರ ನೀಡುತ್ತಿದ್ದ ಸಹಾಯಧನವನ್ನು ಪೂರ್ತಿಯಾಗಿ ಪಾವತಿ ಮಾಡಲಾಗಿದೆಯೇ :

ಉ) ಇಲ್ಲವಾದಲ್ಲಿ, ಬಾಕಿ ಹಣವನ್ನು ಯಾವಾಗ ಪಾವತಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 13331 ಸಣ್ಣ ಕೈಗಾರಿಕಾ ಘಟಕಗಳು ಇರುತ್ತವೆ.

1. ಮಂಗಳೂರು : 7429
2. ಬಂಟ್ವಾಳ : 2012
3. ಬೆಳ್ತಂಗಡಿ : 907
4. ಪುತ್ತೂರು : 2113
5. ಸುಳ್ಯ : 870

ಆ) ಅರ್ಹ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ.

ಇ) 1-1-99 ರಿಂದ ಇಲ್ಲಿಯವರೆಗೆ 927 ಘಟಕಗಳಿಗೆ ರೂ. 22.00 ಕೋಟಿಗಳನ್ನು ಮಂಜೂರು ಮಾಡಲಾಗಿದೆ.

ಈ) ರೋಗಗ್ರಸ್ತ ಕೈಗಾರಿಕೆಗಳಿಗೆ ಸಹಾಯಧನವನ್ನು ಮಂಜೂರು ಮಾಡುವ ಯಾವುದೇ ಯೋಜನೆ ಇರುವುದಿಲ್ಲ. ರೋಗಗ್ರಸ್ತ ಕೈಗಾರಿಕೆಗಳಿಗೆ ಪುನಶ್ಚೇತನ ಕಾರ್ಯಕ್ರಮದಡಿಯಲ್ಲಿ ಬಡ್ಡಿ ರಹಿತ, ಬೀಜಧನ ಸಾಲ ನೀಡಲಾಗುತ್ತದೆ.

ಉ) ಬಡ್ಡಿ ರಹಿತ ಬೀಜಧನ ಸಾಲ ನೀಡಲು ಬಾಕಿ ಇರುವುದಿಲ್ಲ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಸಚಿವರು ತಮ್ಮ ಉತ್ತರದಲ್ಲಿ 1-1-99ರಿಂದ ಇಲ್ಲಿಯವರೆಗೆ 927 ಘಟಕಗಳಿಗೆ ಕೋಟಿ ರೂಗಳನ್ನು ಮಂಜೂರು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಐದು ವರ್ಷಗಳಲ್ಲಿ ಮಂಜೂರು ಮಾಡಿದ್ದೇ ವಿನಾಃ ಯಾವುದೇ ಕೈಗಾರಿಕೆಗಳಿಗೆ ಪಾವತಿಸಿದಂಥ ವಿಚಾರ ಇದರಲ್ಲಿ ಕಂಡು ಬರಲಿಲ್ಲ. ದಯಮಾಡಿ ಯಾವಾಗ ಅದನ್ನು ಪಾವತಿ ಮಾಡುತ್ತಾರೆಂಬುದನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಆಶೋಕ್‌ರವರು ಮೊದಲನೇಯ ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಇದಕ್ಕೆ ನಾನು ದೀರ್ಘವಾಗಿ ಉತ್ತರಿಸಿದ್ದೇನೆ. ಡಿಐಸಿ ಗಳಿಂದ ಸ್ಕ್ಯಾಂಕ್ಷನ್ಡ್ ಲೆಟರ್ ಮಾತ್ರ ಕೊಟ್ಟಿದ್ದಾರೆ ಅಷ್ಟೇ. 1 ಲಕ್ಷ 2 ಲಕ್ಷ, 3 ಲಕ್ಷ, ಎಂದು ಆದರೆ ಬಿಡುಗಡೆಯಾಗಿಲ್ಲ. ಆದುದರಿಂದ ನಾನು ಈಗಾಗಲೇ ವಿವರವಾಗಿ ಉತ್ತರಿಸಿದ್ದೇನೆ, ಈಗ 140 ಕೋಟಿ ರೂಪಾಯಿ ಹಣವನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ಈಗಾಗಲೇ 81 ಕೋಟಿ ರೂಪಾಯಿ ಬಿಡುಗಡೆಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ, ಇನ್ನು 60 ಕೋಟಿ ರೂಪಾಯಿಯನ್ನು ಕೆಎಸ್ಎಫ್‌ಸಿ ಯಿಂದ ಬಿಡುಗಡೆ ಮಾಡುತ್ತೇನೆ, ಅಲ್ಲಿಗೆ 140 ಕೋಟಿ ರೂಪಾಯಿ ಆಗುತ್ತದೆ, ಇನ್ನು 250 ಕೋಟಿ ರೂಪಾಯಿ ಪಾವತಿ ಮಾಡತಕ್ಕಂಥ ದುಡ್ಡು ಇರುತ್ತದೆ, ಅದನ್ನೂ ಸಹ ನಾವು ಮುಂದಿನ ದಿನಗಳಲ್ಲಿ ಪಾವತಿ ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : 22 ಕೋಟಿ ರೂ ಎಂದು ಇಲ್ಲಿ ಉಲ್ಲೇಖ ಆಗಿದೆ, ಆದರೆ 28 ಕೋಟಿ ರೂಪಾಯಿ ನಷ್ಟದಲ್ಲಿವೆ. ಮುಚ್ಚುವಿಕೆ ಆಗುವಂಥ ಹಂತದಲ್ಲಿ ಈ ಸಂದರ್ಭದಲ್ಲಿ ನಾನು ಇನ್ನೊಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಚ್ಛಿಸುತ್ತೇನೆ, ಮಾನ್ಯ ಸಚಿವರೇ, ವಿಶೇಷ ಆರ್ಥಿಕ ವಲಯ, ಸ್ಪೆಷಲ್ ಎಕಾನಾಮಿಕ್ ಜೋನ್ ಮೂಲಕ ಕೇವಲ ದಕ್ಷಿಣ ಕನ್ನಡ ಜಿಲ್ಲೆ ಕೈಗಾರಿಕೆಗಳಿಗೆ ಮಾತ್ರ ಅಲ್ಲ ಇಡೀ ಕರ್ನಾಟಕಕ್ಕೆ ಒಂದು ಆರ್ಥಿಕವಾಗಿ ಶಕ್ತಿ ಕೊಡುವಂಥ ವಿಶೇಷ ಆರ್ಥಿಕ ವಲಯ ಮಂಜೂರಾತಿ ಆಗಿದೆ, ಇನ್ನು ಅದು ಪ್ರಾರಂಭದ ಹಂತದಲ್ಲಿದೆ, ಅದಕ್ಕೆ ಸಂಬಂಧಪಟ್ಟ ಎಲ್ಒಯು ಅನ್ನು ಮಾಡುವ ದೃಷ್ಟಿಯಿಂದ ಏಕೆ ವಿಳಂಬ ಮಾಡುತ್ತಿದ್ದೀರಿ ? ತಕ್ಷಣ ಅದನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್‌ಭಟ್‌ರವರ ಲೆಕ್ಕಾಚಾರ ಕರೆಕ್ಟ್ ಆಗಿರುತ್ತದೆ. 22 ಕೋಟಿ ರೂಪಾಯಿ ಬಾಕಿ ಇದೆ ಎಂದು ನನಗೆ ಮಾಹಿತಿ ಬಂದಿದೆ, ಮತ್ತೆ ಇದಕ್ಕಿಂತ ಹೆಚ್ಚೂ ಕೂಡ ಇರಬಹುದು. ಇಷ್ಟೊಂದು ಇಲ್ಲ ಎಂದು ನಾನು ಇದರ ಬಗ್ಗೆ ಡಿಸ್‌ಪ್ಯೂಟ್ ಹೋಗುವುದಿಲ್ಲ. ನಾವು ರಿಲೀಜ್ ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನೂ ಕೂಡ ಕನ್ಸಿಡರ್ ಮಾಡುತ್ತೇನೆ. ಸ್ಪೆಷಲ್ ಎಕನಾಮಿಕ್ ಜೋನ್ ಬಗ್ಗೆ ತಾವು ಕೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿಕೊಡಿ. ಇದಕ್ಕೆ ಬಹಳ ಸಮಂಜಸವಾದ ಮತ್ತು ದೀರ್ಘವಾದ ಉತ್ತರವನ್ನು ನಾನು ಕೊಡುತ್ತೇನೆ. ಮತ್ತು at the same time ದಲ್ಲಿ ಎಸ್.ಎ. ಜಡ್ ನ್ನು ಮಂಗಳೂರಿನಲ್ಲಿ ಮಾಡತಕ್ಕಂಥವರ ಬಗ್ಗೆ ಈಗಾಗಲೇ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಏಕಾಏಕಿ ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ಮುಚ್ಚಿದೆ. ಈಗ ಜಿಲ್ಲಾ ಕೇಂದ್ರಕ್ಕೆ ನಿರುದ್ಯೋಗಿ ಯುವಕರು ಅರ್ಜಿ ಸಲ್ಲಿಸಲ್ಲಿಸಲಿಕ್ಕೆ ಮತ್ತು ಮಾಹಿತಿ ಪಡೆದುಕೊಳ್ಳುವುದಕ್ಕೆ ಹಾಗೂ ಸಂದರ್ಶನಕ್ಕೆ ಹೋಗ ಬೇಕಾಗಿದೆ. ನಮ್ಮ ಪುತ್ತೂರಿನಿಂದ ಮಂಗಳೂರಿಗೆ ಹೋಗಿಬರಬೇಕಾದರೆ ಸಾಧಾರಣವಾಗಿ 280 ಕಿ.ಮೀ. ಆಗುತ್ತದೆ, ಒಬ್ಬ ನಿರುದ್ಯೋಗಿ ಯುವಕರು ಇಲ್ಲಿಗೆ ಸುಮಾರು ಕೈಗಾರಿಕಾ ಕೇಂದ್ರಗಳನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥದ್ದು ಪ್ರತ್ಯೇಕವಾದ ಪ್ರಶ್ನೆ ಹಾಕಬೇಕಾಗುತ್ತದೆ. ಆದರೆ, ಮಾನ್ಯ ಗೌರವಾನ್ವಿತ ಸದಸ್ಯರು ಮೊದಲನೇ ಬಾರಿಗೆ ಇಲ್ಲಿಗೆ ಗೆದ್ದು ಬಂದಿರುವುದರಿಂದ ನಾನು ಅವರಿಗೆ ಈ ಸಂದರ್ಭದಲ್ಲಿ ಅವರ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆಯ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಯಾವ್ಯಾವಾ ಇಲಾಖೆಯಲ್ಲಿ ಎಷ್ಟೆಷ್ಟು ಜನರನ್ನು ಕಡಿಮೆ ಮಾಡಿದರೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತದೆ ಮತ್ತು ಇದರಿಂದ ಸರ್ಕಾರದ ಮೇಲಿನ ಹೊರೆಯೂ ಕೂಡ ಕಡಿಮೆಯಾಗುತ್ತದೆ ಎಂದು ಅವರು ನೀಡಿದ ತಕ್ಕಂಥ ವರದಿಯ ಶಿಫಾರಸ್ಸಿನ ಮೇಲೆ ಸುಮಾರು ಆರೇಳು ತಿಂಗಳ ಹಿಂದೆಯೇ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ಮುಚ್ಚಬೇಕು. ಏಕೆಂದರೆ ಅಲ್ಲಿರತಕ್ಕಂಥವರಿಗೆ ಏನು ಕೆಲಸವಿಲ್ಲವೆಂದು ಈ ತೀರ್ಮಾನ ತೆಗೆದುಕೊಂಡಿದ್ದಾರೆ. ಆದ್ದರಿಂದ ತತ್‌ಕ್ಷಣ ಎದ್ದುನಿಂತುಕೊಂಡು ಇದರ ಬಗ್ಗೆ ಮುನರ್ ವಿಮರ್ಶೆ ಮಾಡಿ ಅವರಿಗೆಲ್ಲಾ ಕೆಲಸ ಕೊಡುತ್ತೇನೆ ಎಂದು ಹೇಳುವಂಥ ಸ್ಥಿತಿಯಲ್ಲಿ ನಾನಂತು ಇಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದೇನೆಂದರೆ, ತಾಲ್ಲೂಕು ಮಟ್ಟದಲ್ಲಿ ಕೈಗಾರಿಕೆಗಳ ಬಗ್ಗೆ ಏನಾದರೊಂದು ವ್ಯವಸ್ಥೆ ಇರಬೇಕಾಗುತ್ತದೆ. ಆದ್ದರಿಂದ ನಾವೆಲ್ಲಾ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ನಿಮ್ಮ ಸಲಹೆಯನ್ನು ನಾನು ಈಗ ಸ್ವಾಗತ ಮಾಡುತ್ತೇನೆ.

ಬಸವ ಕಲ್ಯಾಣ ಪಟ್ಟಣದ ಸಮಗ್ರ ಅಭಿವೃದ್ಧಿ

51(368) **ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಕೂಬ.(ಬಸವಕಲ್ಯಾಣ)** : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಸವಕಲ್ಯಾಣ ಪುರಸಭೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ ಎಷ್ಟು ;

ಆ) ಈ ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;